

ದಾಖಲೆಗಳಿವೆ. ಅಂದಿನಿಂದ ಕಣಿವೆಯಲ್ಲಿ ಪೊಹುಟು ಗೀಯ್ಸರ್ ಪುಟಿಯತೊಡಗಿತು ಎಂದು ಮಾವೋರಿ ಜನ ಪುರಾವೆ ಒದಗಿಸುತ್ತಾರೆ.

ಇಂದಿಗೂ ಮಾವೋರಿ ಕಣಿವೆಯಲ್ಲಿ ಪೊಹುಟು ಜೋಡಿ ಗೀಯ್ಸರ್ ಪ್ರಸಿದ್ಧವಾಗಿದೆ. ಬೆಂಕಿ ದೇವತೆಗಳೆಂದೇ ಹೆಸರಾದ ಟೇಪುಪು ಮತ್ತು ಟೆಹುಟಾ ಇವರು ಸಹೋದರಿಯರು. ಒಮ್ಮೆ ಅವರು ತಮ್ಮ ಕಳೆದುಹೋದ ಸಹೋದರನನ್ನು ಪಾತಾಳ ಲೋಕದಲ್ಲಿ ಹುಡುಕುತ್ತಿದ್ದರು. ಹುಡುಕುತ್ತ ಹುಡುಕುತ್ತ ಎಷ್ಟೋ ದಿನಗಳ ನಂತರ ಅವರು ಪಾತಾಳ ಲೋಕದಿಂದ ಭೂಲೋಕದ ಅಂಚಿಗೆ ಬಂದು ತಲೆಎತ್ತಿದರು. ಆಗ ಭೂಮಿಯ ಮೇಲೆ ಬಿಸಿ ನೀರು ಚಿಮ್ಮತೊಡಗಿತು. ಅವುಗಳೇ ಇಂದಿನ ಪೊಹುಟು ಗೀಯ್ಸರ್ ಎಂದು ಮಾವೋರಿ ಜನಾಂಗದ ನಂಬಿಕೆ. ಪೊಹುಟು ಸಮೀಪವೇ ಪ್ರಿನ್ಸ್ ಆಫ್ ವೇಲ್ಸ್ ಎಂಬ ಮತ್ತೊಂದು ಸುಪ್ರಸಿದ್ಧ ಗೀಯ್ಸರ್ ಪುಟಿಯುತ್ತದೆ. ಇಷ್ಟು ಹತ್ತಿರ ಹತ್ತಿರ ಗೀಯ್ಸರ್‌ಗಳು ಜಗತ್ತಿನ ಯಾವ ದೇಶದಲ್ಲಿಯೂ ಪುಟಿಯುವುದಿಲ್ಲ ಎಂದು ಗೈಡ್ ವಿವರಿಸುತ್ತಲೇ ಇದ್ದ.

ನಾವು ಆ ಕಣಿವೆಯಲ್ಲಿ ಸುಮಾರು ಎರಡು ತಾಸುಗಳ ಕಾಲ ಬಿಸಿ ನೀರ ಚಿಲುಮೆ, ಜ್ವಾಲಾಮುಖಿಗಳನ್ನೂ ವೀಕ್ಷಿಸಿದೆವು. ತಪ್ತ ಕುಂಡಗಳಲ್ಲಿ ಬಿಸಿ ನೀರು ಉಕ್ಕುವುದು, ಖಾಲಿಯಾಗುವುದು ನಡೆದೇ ಇತ್ತು. ಕೆಲವು ಕುಂಡಗಳಲ್ಲಿ ಬೆಂಕಿಯ ಜ್ವಾಲೆ ಕಾಣಿಸುತ್ತಿದ್ದವು. ಬಿಸಿನೀರ ತೊರೆಗಳು, ತಣ್ಣೀರ ತೊರೆಗಳು ಕೂಡ ಅಲ್ಲಿ ಹರಿಯುತ್ತಿದ್ದವು. ಸುಮಾರು 300 ಬಿಸಿನೀರ ಚಿಲುಮೆಗಳು, 11 ಸರೋವರಗಳು ಮಾವೋರಿ ಕಣಿವೆಯಲ್ಲಿ ದಾಖಲಾಗಿವೆಯಂತೆ.

ಹಚ್ಚ ಹಸುರಿನ ಸರೋವರವೊಂದು ಮಾವೊರಿ ಜನಾಂಗಕ್ಕೆ ಇಂದಿಗೂ ಪವಿತ್ರವೆಂದು ನಂಬಲಾಗಿದೆ. ಮಾವೋರಿ ಕಣಿವೆಯ ಪಕ್ಕದಲ್ಲಿಯೇ ರೊಟೊರುವಾ ನಗರಸಭೆಯ ಕ್ವಿರಾವೊಪಾರ್ಕ್ ಇದೆ. ಅಲ್ಲಿಯೂ ಪುಟ್ಟ ಪುಟ್ಟ ಟಾರ್‌ರಸ್ತೆ, ಕಾಲುದಾರಿ, ಸೇತುವೆ ನಿರ್ಮಿಸಿದ್ದಾರೆ. ಆಲ್ಕಲೈನ್, ಆಸಿಡಿಕ್, ಸೆಲಿಸಿಯಸ್ ರಾಸಾಯನಿಕ ಧಾತುಗಳನ್ನು ಕಾರುವ, ಬುಸುಗುಡುವ ಬಿಸಿನೀರ ಬುಗ್ಗೆಗಳು ಅಲ್ಲಿಯೂ ಗಮನಸೆಳೆಯುತ್ತವೆ. ಕಣಿವೆಯ ಹತ್ತಿರದ ಮತ್ತೊಂದು ಆಕರ್ಷಣೆ ಮಾವೋರಿ ಮ್ಯೂಸಿಯಂ. ಅಲ್ಲಿ ಮಾವೋರಿ ಜನಾಂಗದ ಕುಸುರಿ ಕೆತ್ತನೆಗಳು, ಆಯುಧಗಳು, ಕೃಷಿ ಉಪಕರಣ, ಗೃಹಬಳಕೆಯ ವಸ್ತುಗಳು, ಒಲೆ, ಆಹಾರ ಪದಾರ್ಥಗಳನ್ನು ಪ್ರದರ್ಶಿಸುತ್ತಾರೆ. ತಿಂಡಿ, ತಿನಿಸು, ಪಾನೀಯಗಳೂ ಲಭ್ಯ. ಮನರಂಜನೆಗಾಗಿ ಮಾವೋರಿ ನೃತ್ಯ, ಸಂಗೀತ, ವೇಷಭೂಷಣಗಳು, ಪ್ರದರ್ಶನಗಳೂ ಅಲ್ಲಿ ನಡೆಯುತ್ತವೆ.

## ವಸಾಹತುಶಾಹಿ ಹೆಜ್ಜೆಗುರುತು

ಚಾರಿತ್ರಿಕವಾಗಿ ರೊಟೊರುವಾದಲ್ಲಿ ಮಾವೋರಿ ಜನಾಂಗದ ಟೇ ಅರಮಾ ಇವಿ ಎಂಬ ಧೀರ ಮಹಿಳೆ ಏಕಾಂಗಿಯಾಗಿ ವಾಸಿಸುತ್ತಿದ್ದಾಗ, 1828ರಲ್ಲಿ ಯೂರೋಪಿನ ವ್ಯಾಪಾರಿ ಫಿಲಿಪ್ ಟಾಪ್‌ಸೆಲ್ ಪ್ಲೆಂಟಿಕೊಲ್ಲಿಯ ಮಾಕೆಟು ದ್ವೀಪಕ್ಕೆ ಬಂದಿಳಿದ. ಆಗ ಟೇ ಅರಮಾ ಮತ್ತು ಫಿಲಿಪ್ ಟಾಪ್ ಸೆಲ್ ಪರಸ್ಪರ ಪರಿಚಯವಾಗಿ ಕೆಲವು ದಿನಗಳ ನಂತರ ಒಬ್ಬರನೊಬ್ಬರು ಪ್ರೀತಿಸಿ ಮದುವೆಯಾದರು 1960ರವರೆಗೆ ಯೂರೋಪಿಯನ್ನರು ತಂಡತಂಡವಾಗಿ ಅಲ್ಲಿಗೆ ಬಂದು ನೆಲೆಸಿದರು. 1960ರಲ್ಲಿ ಮಾವೋರಿ ಜನಾಂಗ ಮತ್ತು ಯೂರೋಪಿಯನ್ನರ ನಡುವೆ ಭೀಕರ ಕಾಳಗ ನಡೆಯಿತು. ನಂತರ ಅವರಲ್ಲಿ ಒಪ್ಪಂದವಾಗಿ ಶಾಂತಿ ನೆಲೆಸಿತು. ಆದರೆ ಯೂರೋಪಿಯನ್ನರೇ ವಸಹಾತುಶಾಹಿಗಳಾಗಿ ಮೆರೆದರು.

ಈಗ ರೊಟೊರುವಾದಲ್ಲಿ ಶೇಕಡ 25ರಿಂದ 35ರಷ್ಟು ಮಾವೋರಿ ಜನಾಂಗದವರು ಕೆಲಸ ಮಾಡುತ್ತಿದ್ದಾರೆ. ಇಂದಿಗೂ ಅಲ್ಲಿಯ ಹಳ್ಳಿ, ರಸ್ತೆ, ಕೆಲವು ಕಟ್ಟಡ, ಸರೋವರಗಳಿಗೆ ಮಾವೋರಿ ಹೆಸರುಗಳಿವೆ. ರೊಟೊರುವಾ ಇಂದು ಜಗತ್ಪ್ರಸಿದ್ಧ ಪ್ರವಾಸಿತಾಣ. ಕಾಡಿನ ಬೈಕಿಂಗ್, ಸರೋವರಗಳ ಸ್ಪೋರ್ಟ್‌ಫಿಶಿಂಗ್, ಸ್ಕೀಯಿಂಗ್, ಸ್ವಿಮಿಂಗ್, ಟ್ರೇಲೈನ್ ಜಾರ್ಜ್‌ರ‍್ಯಾಫ್ಟಿಂಗ್, ಫ್ಲೋಟ್ ಪ್ಲೇನಿಂಗ್ ಮೊದಲಾದ ಸಾಹಸ ಕ್ರೀಡೆಗಳು ಯುವ ತಲೆಮಾರನ್ನು ಆಕರ್ಷಿಸುತ್ತವೆ.

## ಡೆಕೊಸ್ಟೈಲ್ ಬ್ಲೂಬಾತ್ ಅಭ್ಯಂಜನ

ರೊಟೊರುವಾಕ್ಕೆ ಬಂದವರು ಪಾಲಿನೇಷಿಯನ್ ಸ್ಪಾಗಳಿಗೆ ಭೇಟಿ ನೀಡದಿದ್ದರೆ ಪ್ರವಾಸವೇ ಅಪೂರ್ಣವೆನಿಸುತ್ತದೆ. ನಗರದ ಪೂರ್ವ ಸರೋವರತೀರದಲ್ಲಿ ಐತಿಹಾಸಿಕ ಅತಿ ದೊಡ್ಡ ತಂಡೋರ್ ವಿನ್ಯಾಸದ ಬಿಸಿನೀರ ಸ್ನಾನದಮನೆ ಇದೆ. ಮೈಗೆ ಎಣ್ಣೆ ಹಚ್ಚಿಕೊಂಡು, ಮಸಾಜ್ ಮಾಡಿಸಿಕೊಂಡು ನೈಸರ್ಗಿಕ ಡೆಕೊಸ್ಟೈಲ್ ಬ್ಲೂಬಾತ್ ಅಭ್ಯಂಜನ ಸ್ನಾನ ಮಾಡುವುದು ಮರೆಯಲಾಗದ ಅನುಭವ. ಅಲ್ಲಿ ಒಟ್ಟು 17 ಬಿಸಿನೀರಿನ ಸ್ನಾನ ಗೃಹಗಳಿವೆ. ಮಕ್ಕಳು, ಮಹಿಳೆಯರು, ಕುಟುಂಬ ಸದಸ್ಯರು ಹಾಗೆಯೇ ಗಂಡು–ಹೆಣ್ಣು ಎಂಬ ಭೇದಭಾವವಿಲ್ಲದೆ ಎಲ್ಲರೂ ನೈಸರ್ಗಿಕ ಸ್ನಾನ ಮಾಡಬಹುದು. ಇಲ್ಲಿಯ ಸ್ಪಾಗಳು (ಸ್ನಾನ ಗೃಹ) ಆ ದೇಶಕ್ಕೆ ಒಳ್ಳೆಯ ಆರ್ಥಿಕ ಲಾಭವನ್ನು ತರುತ್ತಿವೆ.

ಅಲ್ಲಿಯ ಬಿಸಿನೀರ ಬುಗ್ಗೆಗಳು ಕೇವಲ ಸ್ನಾನಕ್ಕೆ ಮಾತ್ರವಲ್ಲ, ಇಡೀ ನಗರಕ್ಕೆ ಶಕ್ತಿ ಮತ್ತು ಬೆಳಕು ಕೊಡುವ ಯೋಜನೆಗಳಿಗೆ ಪೂರಕವಾಗಿವೆ. ವೈ.ಆರ್.ಕೆ ಎಂಬ ತಂತ್ರಜ್ಞಾನ ಸಂಸ್ಥೆ ಥರ್ಮಲ್ ಎಕ್ಸ್‌ಪ್ಲೋರರ್ ಹೈವೇ ಪ್ರಾರಂಭಿಸಿ ಪ್ರವಾಸಿಗರಿಗೆ ಸೌಲಭ್ಯ ಒದಗಿಸಿದೆ. ಒಂದು ದೇಶ ವಿಪತ್ತು ತರಬಲ್ಲ ಜ್ವಾಲಾಮುಖಿ, ಬಿಸಿನೀರ ಬುಗ್ಗೆಗಳನ್ನು ಸಮರ್ಪಕವಾಗಿ ಬಳಸಿ ಅಭಿವೃದ್ಧಿ ಹೊಂದಬಲ್ಲದು ಎನ್ನುವುದಕ್ಕೆ ನ್ಯೂಜಿಲೆಂಡ್‌ನ ರೊಟೊರುವಾ ಒಂದು ಜೀವಂತ ಉದಾಹರಣೆ.

ನಾವು ರೊಟೊರುವಾದಲ್ಲಿ ಕಳೆದದ್ದು ಎರಡೇ ದಿನ. ಅಲ್ಲಿ ಹೆಚ್ಚು ದಿನ ಇರಲು ಸಾಧ್ಯವಿಲ್ಲ, ಹೊಟ್ಟೆ ತೊಳೆಸುವಂಥ ವಾಕರಿಕೆಯನ್ನು ಸಹಿಸುವುದು ಸುಲಭವೇನಲ್ಲ.